**<u>ದಿನಾಂಕಃ 18.04.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ.ಐ.ಎಸ್.ಎನ್ ವಕೀಲರಿಂದಃ 1 ನೇ ಪ್ರತಿವಾದಿಯ ಪರವಾಗಿಃ</u>**

**11).** ನನ್ನ ತಂದೆ ಸೋಮಪ್ಪ ಚಂದಾಪುರರವರು 2018 ರಲ್ಲಿ ಮೃತಪಟ್ಟಿದ್ದಾರೆ. ನಿಮ್ಮ ತಂದೆ ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂಬ ಸಲಹೆಗೆ ಸಾಕ್ಷಿಯು ಬಲಗಡೆ ಚಪ್ಪೆಯ ಮೇಲೆ ಗಡ್ಡೆಯಾಗಿ ಶಸ್ತ್ರ ಚಿಕಿತ್ಸೆಯಾಗಿ ನಂತರ ಮೃತಪಟ್ಟಿದ್ದಾರೆ ಎಂದು ಉತ್ತರಿಸಿದ್ದಾರೆ. ನನ್ನ ತಂದೆ ಮೃತಪಟ್ಟಾಗ 67 ರಿಂದ 68 ವರ್ಷ ವಯಸ್ಸಾಗಿತ್ತು. ಶಸ್ತ್ರ ಚಿಕಿತ್ಸೆ ಮಾಡುವ ಮೊದಲು ಚೆನ್ನಾಗಿ ಇದ್ದರು. ನನ್ನ ತಂದೆ ಜೀವತ ಇದ್ದಾಗ ಹೆಂಡತಿಯೊಂದಿಗೆ ಪ್ರತ್ಯೇಕವಾಗಿ ವಾಸ ಇದ್ದರು ಅಂದರೆ ಸರಿಯಲ್ಲ. ನನ್ನ ತಂದೆಯ ಯೋಗಕ್ಷೇಮವನ್ನು 1 ನೇ ಪ್ರತಿವಾದಿ ನೋಡುತ್ತಿದ್ದರು ಅಂದರೆ ಸರಿಯಲ್ಲ. ನನ್ನ ತಾಯಿ 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮನೆಯಲ್ಲಿ ವಾಸ ಇದ್ದಾರೆ ಅಂದರೆ ಸರಿ. ನನ್ನ ತಂದೆ ತಾಯಿಗೆ ನಾವು ಮೂರು ಜನ ಮಕ್ಕಳು. 1 ನೇ ವಾದಿಗೆ 48 ವರ್ಷ. ನನಗೆ 42 ವರ್ಷ. 1 ನೇ ಪ್ರತಿವಾದಿಗೆ 38 ವರ್ಷ ವಯಸ್ಸು. 2 ನೇ ಪ್ರತಿವಾದಿಗೆ 67 ವರ್ಷ.

**12)** ನಾನು ಬ್ಯಾಡಗಿ ತಾಲೂಕಿನ ಕಾಕೋಳ ಗ್ರಾಮದ ಶಂಕರಗೌಡರವರೊಂದಿಗೆ ಮದುವೆಯಾಗಿದ್ದೇನೆ ಅಂದರೆ ಸರಿ. ಮದುವೆ ಸಮಯದಲ್ಲಿ ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದಾರೆ ಅಂದರೆ ಸರಿ. ಎಷ್ಟು ವರದಕ್ಷಿಣೆ ಕೊಟ್ಟಿದ್ದಾರೆ ಎಂದು ನನಗೆ ನೆನಪಿಲ್ಲ. 1 ನೇ ಪ್ರತಿವಾದಿ 9 ನೇ ತರಗತಿಯವರೆಗೆ ಓದಿದ್ದಾನೆ. 1 ನೇ ಪ್ರತಿವಾದಿ ಶಾಲೆ ಬಿಟ್ಟ ನಂತರ ನನ್ನ ತಂದೆಯ ಜೊತೆ ವ್ಯಾಪಾರದ ಕೆಲಸದಲ್ಲಿ ಭಾಗಿಯಾಗಿದ್ದ. ನನ್ನ ತಂದೆಗೂ,

1 ನೇ ಪ್ರತಿವಾದಿಗೂ ಹೊಂದಾಣಿಕೆಯಾಗದ ಕಾರಣ ನನ್ನ ತಂದೆ ಪ್ರತ್ಯೇಕವಾಗಿ ವಾಸ ಇದ್ದರು ಅಂದರೆ ಸರಿಯಲ್ಲ.

**13)** 1 ನೇ ವಾದಿ ಶಶಿಕಲಾರವರನ್ನು ಬ್ಯಾಡಗಿ ತಾಲೂಕ ಬೀರನಕೊಪ್ಪ ಗ್ರಾಮದ ಮಹಾದೇವಪ್ಪ ಎನ್ನುವವರಿಗೆ ಮದುವೆ ಮಾಡಿಕೊಟ್ಟಿದ್ದಾರೆ ಅಂದರೆ ಸರಿ. 1 ನೇ ವಾದಿ ಗಂಡನೊಂದಿಗೆ ಜೀವನ ಮಾಡದೇ ತವರು ಮನೆಯಲ್ಲಿ ವಾಸ ಇದ್ದಾರೆ ಎಂಬ ಸಲಹೆಗೆ ಸಾಕ್ಷಿಯು ಆಕೆಗೆ ಜೀವಭಯ ಇರುವದರಿಂದ ತವರುಮನೆಯಲ್ಲಿ ವಾಸ ಇದ್ದಾರೆ ಎಂದು ಉತ್ತರಿಸಿದ್ದಾರೆ. 1 ನೇ ವಾದಿಯ ಮದುವೆ ಸಮಯದಲ್ಲಿ ಎಷ್ಟು ವರದಕ್ಷಿಣೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ವಾದಿ 8 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದಾರೆ. ನನ್ನ ತಂದೆ ಕಟ್ಟಿಸಿರುವ ಮನೆಯಲ್ಲಿ 1 ನೇ ವಾದಿ ವಾಸ ಇದ್ದಾರೆ ಅಂದರೆ ಸರಿಯಲ್ಲ. ಆಕೆ ಗಂಡನ ಮನೆಯಿಂದ ತಂದ ಹಣದಿಂದ ಮನೆಕಟ್ಟಿಸಿಕೊಂಡು ಬೇರೆಯಾಗಿ ವಾಸ ಇದ್ದಾರೆ.

**14)** ನನ್ನ ತಂದೆಯ ಅಂತಿಮ ಕಾಲದಲ್ಲಿ 2 ನೇ ಪ್ರತಿವಾದಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. 1 ನೇ ವಾದಿಯ ಮಕ್ಕಳ ವಿಧ್ಯಾಭ್ಯಾಸದ ಖರ್ಚನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಅಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ಗುತ್ತಲ ಪಟ್ಟಣ ಪಂಚಾಯತಿ ಆಸ್ತಿ ನಂಬರಃ 1619 ನ್ನು 1 ನೇ ವಾದಿಯ ಹೆಸರಿಗೆ ಹಕ್ಕುಬಿಟ್ಟುಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಈ ಆಸ್ತಿಯನ್ನು ನನ್ನ ತಂದೆ ಚಳಗೇರಿ ಎಂಬುವವರಿಂದ ಖರೀದಿ ಮಾಡಿದ್ದರು ಅಂದರೆ ಸರಿ. ಈ ಆಸ್ತಿಯನ್ನು 1 ನೇ ವಾದಿಯ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಟ್ಟಿದ್ದಾರೆ ಅಂದರೆ ಸರಿ. ಈ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ.

**15)** ಗುತ್ತಲ ಗ್ರಾಮದ ಸರ್ವೆ ನಂಬರಃ 238/8ಐ ವಿಸ್ತೀರ್ಣ 4 ಗುಂಟೆ ಜಮೀನನ್ನು ದಿನಾಂಕಃ 31.03.2005 ರಂದು ನನ್ನ ತಂದೆ ಹಣಕೊಟ್ಟು 1ನೇ ವಾದಿಯ ಹೆಸರಿಗೆ ಖರೀದಿ ಮಾಡಿಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸಂಘದಲ್ಲಿ ಸಾಲ ಮಾಡಿ 1ನೇ ವಾದಿ ಖರೀದಿ ಮಾಡಿದ್ದಾರೆ ಎಂದು ಉತ್ತರಿಸಿದ್ದಾರೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಈ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಅಂದರೆ ಸರಿ. ಈ ಎರಡು ಆಸ್ತಿಗಳು ಮರಣ ಶಾಸನ ಪತ್ರದ ಪ್ರಕಾರ 1ನೇ ವಾದಿಯೇ ಮಾಲೀಕಳು ಅಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನ್ನ ತಂದೆ ಯಾವುದೇ ಮರಣ ಶಾಸನ ಪತ್ರ ಬರೆದುಕೊಟ್ಟಿಲ್ಲ ಎಂದು ಉತ್ತರಿಸಿದ್ದಾರೆ.

**16)** ನನ್ನ ತಂದೆಯ ಅಣ್ಣ ತಮ್ಮಂದಿರೊಂದಿಗೆ ವಿಭಾಗ ಮಾಡಿಕೊಂಡಾಗ ನನ್ನ ತಂದೆಗೆ ಗುತ್ತಲ ಗ್ರಾಮ ಪಂಚಾಯತಿ ಆಸ್ತಿ ನಂಬರಃ 1428 ಖಾಲಿ ಜಾಗ ಹಿರಿಯರ ಆಸ್ತಿ ಬಂದಿತ್ತು ಅಂದರೆ ಸರಿ. ಈ ಆಸ್ತಿಯು ಗುತ್ತಲ ಗ್ರಾಮದ ದ್ಯಾಮವ್ವನ ಗುಡಿಯ ಹತ್ತಿರ ಇದೆ ಅಂದರೆ ಸರಿ. ನನ್ನ ತಂದೆ ಸ್ವಯಾರ್ಜಿತವಾಗಿ ದುಡಿದು ಸರ್ವೆ ನಂಬರಃ 447/2 ಆಸ್ತಿಯನ್ನು ಖರೀದಿ ಮಾಡಿದ್ದಾರೆ ಎಂಬ ಸಲಹೆಗೆ ಸಾಕ್ಷಿಯು ನಾವು 4 ಜನ ಸೇರಿ ದುಡಿದು ಸಂಪಾದನೆ ಮಾಡಿದ ಆಸ್ತಿ ಅಂದರೆ ಸರಿ. ಈ ಆಸ್ತಿಯನ್ನು ನಾನು ಚಿಕ್ಕವಳಿದ್ದಾಗ ಖರೀದಿ ಮಾಡಿದ ಆಸ್ತಿ ಅಂದರೆ ಸರಿ. ಈ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇದೆ ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಸಿ.ಜೆ.ಎಂ, ಹಾವೇರಿ.